ಕರ್ನಾಟಕ ಸರ್ಕಾರ

(ಸಾರಿಗೆ ಇಲಾಖೆ)

ಸಂಖ್ಯೆ : ಸಾಆ: ನೋಂದಣಿ-೨: ವೈವ : ೭೮:೨೦೦೦-೦೧

ಸಾರಿಗೆ ಆಯುಕ್ತರ ಕಛೇರಿ,
೪ನೇ ಮಹಡಿ, ಬಹು ಮಹಡಿಗಳ ಕಟ್ಟಡ,
ಬೆಂಗಳೂರು, ದಿನಾಂಕ : ೩೧-೦೮-೨೦೦೦

## ಸುತ್ತೋಲೆ

ವಿಷಯ: - ಸರ್ಕಾರಿ ವಾಹನಗಳ ಮೇಲೆ ಕನ್ನಡ ನೋಂದಣಿ ಸಂಖ್ಯೆಯನ್ನು ಅಳವಡಿಸುವ ಬಗ್ಗೆ

ಉಲ್ಲೇಖ : - ಸರ್ಕಾರದ ಸುತ್ತೋಲೆ ಸಂಖ್ಯೆ : ಸಿಆಸುಇ : ೧೭೪ : ಶಿವಾನೀ:

೨೦೦೦ , ದಿನಾಂಕ : ೧೮-೮-೨೦೦೦

ಮೇಲ್ಕಾಣಿಸಿದ ವಿಷಯಕ್ಕೆ ಸಂಬಂಧಿಸಿದಂತೆ, ಸರ್ಕಾರದ ಎಲ್ಲಾ ವಾಹನಗಳ ನೋಂದಣಿ ಸಂಖ್ಯೆಯನ್ನು ಆಂಗ್ಲ ಭಾಷೆಯೊಂದಿಗೆ ಕನ್ನಡ ಭಾಷೆಯಲ್ಲಿಯೂ ಕಡ್ಡಾಯವಾಗಿ ಬರೆಸಿ ಪ್ರದರ್ಶಿಸಬೇಕೆಂದು ಉಲ್ಲೇಖಿತ ಸರ್ಕಾರದ ಸುತ್ತೋಲೆಯಲ್ಲಿ ಸೂಚನೆಯನ್ನು ನೀಡಲಾಗಿದೆ.

ಆದುದರಿಂದ ನಿಮ್ಮ ಕಛೇರಿಯ ವಾಹನಗಳಿಗೆ ಆಂಗ್ಲ ಭಾಷೆಯ ನೋಂದಣಿ ಸಂಖ್ಯೆಯ ಫಲಕದೊಂದಿಗೆ ಕನ್ನಡ ಭಾಷೆಯಲ್ಲಿಯೂ ನೋಂದಣಿ ಸಂಖ್ಯೆ ಫಲಕವನ್ನು ಪ್ರದರ್ಶಿಸಲು ಸೂಕ್ತ ಕ್ರಮವನ್ನು ತೆಗೆದುಕೊಳ್ಳಲು ತಿಳಿಸಿದೆ.

ನಿಮ್ಮ ನಂಬುಗೆಯ
**ಸಾರಿಗೆ ಆಯುಕ್ತರು,**
ಬೆಂಗಳೂರು

ಪ್ರತಿಯನ್ನು: -

೧) ರಾಜ್ಯದ ಎಲ್ಲಾ ನೋಂದಣಿ ಪ್ರಾಧಿಕಾರಗಳಿಗೆ, ಮಾಹಿತಿಗಾಗಿ ಮತ್ತು ಸೂಕ್ತ ಕ್ರಮಕ್ಕಾಗಿ

೨) ರಾಜ್ಯದ ಎಲ್ಲಾ ಉಪಸಾರಿಗೆ ಆಯುಕ್ತರುಗಳು ಹಾಗೂ ಜಂಟಿ ಸಾರಿಗೆ ಆಯುಕ್ತರುಗಳಿಗೆ ಮಾಹಿತಿಗಾಗಿ ಮತ್ತು ಸೂಕ್ತ ಕ್ರಮಕ್ಕಾಗಿ.